# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ 14.03.2019ರ ಗುರುವಾರದಂದು ಮಧ್ಯಾಹ್ನ 12.00 ಗಂಟೆಗೆ ಜರುಗಿದ ಸಿಂಡಿಕೇಟಿನ ವಿಶೇಷ ಸಭೆಯ ನಡವಳಿಗಳು.

**ಹಾಜರಿದ್ದ ಸದಸ್ಯರು:**

1. ಪ್ರೊ.ಜಿ.ಹೇಮಂತಕುಮಾರ್ – **ಕುಲಪತಿಗಳು ಹಾಗೂ ಅಧ್ಯಕ್ಷರು**
2. ಪ್ರೊ.ಮಹದೇವ – ಸದಸ್ಯರು
3. ಕು.ಸಹನಾ ಶಿವಪ್ಪ – ಸದಸ್ಯರು
4. ಡಾ.ರಾಜಗೋಪಾಲ್ – ಸದಸ್ಯರು
5. ಡಾ.ಎಂ.ಪ್ರೀತಿ – ಸದಸ್ಯರು
6. ಶ್ರೀ ಜಿ.ಅಶ್ವತನಾರಾಯಣ – ಸದಸ್ಯರು
7. ಪ್ರೊ.ಕೆ.ಟಿ.ಅಪ್ಪಾಜಪ್ಪ – ಸದಸ್ಯರು
8. ಪ್ರೊ.ಎ.ಬಾಲಸುಬ್ರಮಣಿಯನ್ – ಸದಸ್ಯರು
9. ಪ್ರೊ.ಕೆ.ಎಂ.ಮಹದೇವನ್ ಕುಲಸಚಿವರು (ಪರೀಕ್ಷಾಂಗ) – ಸದಸ್ಯರು
10. ಪ್ರೊ. ಲಿಂಗರಾಜ ಗಾಂಧಿ – **ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು**

**ಹಾಜರಾಗದ ಸದಸ್ಯರು:**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಮಾನ್ಯ ಕುಲಪತಿಗಳು ಸಿಂಡಿಕೇಟಿನ ವಿಶೇಷ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿದರು.

ನಂತರ ಕಾರ್ಯಸೂಚಿಯಲ್ಲಿನ ವಿಷಯಗಳನ್ನು ಸಭೆಯಲ್ಲಿ ಮಂಡಿಸಲಾಯಿತು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| ವಿಶೇಷ ಸಭೆ 2019/3.1 | 2019–20ನೇ ಶೈಕ್ಷಣಿಕ ವರ್ಷಕ್ಕೆ ಸ್ಥಳೀಯ ತನಿಖಾ ಸಮಿತಿಯು ನೀಡಿರುವ ಸಂಯೋಜನಾ ವರದಿಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗೆಗೆ. |

| | |
|---|---|
| | ಮಾನ್ಯ ಕುಲಪತಿಯವರು 2019-20ನೇ ಶೈಕ್ಷಣಿಕ ವರ್ಷಕ್ಕೆ ಸ್ಥಳೀಯ ತನಿಖಾ ಸಮಿತಿಯು ನೀಡಿರುವ ಸಂಯೋಜನಾ ವರದಿಗಳನ್ನು ಸಿಂಡಿಕೇಟ್‌ಗೆ ಮಂಡಿಸಿ ಅನುಮೋದಿಸಬೇಕೆಂದು ತಿಳಿಸಿದರು.<br>ಪ್ರೊ. ಬಾಲಸುಬ್ರವಣ್ಯಂರವರು ಮಾತನಾಡಿ ಸ್ಥಳೀಯ ತನಿಖಾ ಸಮಿತಿಯ ಸದಸ್ಯರ ಹೆಸರನ್ನು ಸಂಯೋಜನಾ ವರದಿಯಲ್ಲಿ ದಾಖಲಿಸುವುದರೊಂದಿಗೆ ಸಭೆಯಲ್ಲಿ ಮಂಡಿಸಬೇಕು ಎಂದು ತಿಳಿಸಿದರು.<br>ಕುಲಸಚಿವರು ಮಾತನಾಡಿ ಈ ವರದಿಯು ಸಾಂಪ್ರದಾಯಿಕವಾಗಿ ವಿಸ್ತೃತ ವರದಿಯಾಗಿರುತ್ತದೆ. ಸಮಿತಿಯು ಶಿಫಾರಸ್ಸು ಮಾಡಿರುವ ಸಂಪೂರ್ಣ ವರದಿಯನ್ನು ಮತ್ತು ಸದಸ್ಯರುಗಳ ಹೆಸರನ್ನು ಪುಸ್ತಕದಲ್ಲಿ ಮುದ್ರಿಸಲಾಗಿರುತ್ತದೆ ಎಂದು ತಿಳಿಸಿದರು.<br>ಮಾನ್ಯ ಕುಲಪತಿಯವರು ಸ್ಥಳೀಯ ವಿಚಾರಣ ಸಮಿತಿ ಶಿಫಾರಸ್ಸು ಮಾಡಿರುವ ಕಾಲೇಜುಗಳ ವಿವರಗಳನ್ನು ಸಭೆಗೆ ತಿಳಿಸಿದರು. |
| ತೀರ್ಮಾನ | ವರದಿಯನ್ನು ಪರಿಶೀಲಿಸಿದ ನಂತರ ಸ್ಥಳೀಯ ತನಿಖಾ ಸಮಿತಿಯು ಮಾಡಿರುವ ಶಿಫಾರಸ್ಸಿನ ವರದಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| ವಿಶೇಷ ಸಭೆ 2019/3.2 | ಪ್ರೊ. ಉಷಾ ರಾಣಿ ನಾರಾಯಣ ನಾಗರತ್ನರವರ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ದಾನಿಗಳು ನಿಬಂಧನೆಯಲ್ಲಿ ಸೂಚಿಸಿರುವಂತೆ **ಪ್ರೊ. ಉಷಾರಾಣಿ ನಾರಾಯಣ ನಾಗರತ್ನ**ರವರ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡಲು ಮತ್ತು ದಾನಿಗಳು ದತ್ತಿಯ ನಿಬಂಧನೆಯಲ್ಲಿ ಸೂಚಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ. 20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ. 80ರಷ್ಟು ಹಣವನ್ನು Arts/Commerce/Science/Education ಸ್ನಾತಕೋತ್ತರ ಪದವಿಗಳಲ್ಲಿ ಅತಿಹೆಚ್ಚು ಅಂಕ ಪಡೆದು ಪ್ರಥಮ ಬಾರಿಗೆ ತೇರ್ಗಡೆಯಾಗುವ **ಅಂಧ (Completely Blind Female Student) ವಿದ್ಯಾರ್ಥಿನಿಗೆ** ಚಿನ್ನದ ಪದಕವನ್ನು ನೀಡಲು ಸಿಂಡಿಕೇಟ್ ಅನುಮೋದಿಸಿತು. |
| ವಿಶೇಷ ಸಭೆ 2019/3.3 | ಪ್ರೊ. ಉಷಾ ರಾಣಿ ನಾರಾಯಣ ಸೌಮ್ಯನಾಯಕಿರವರ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ದಾನಿಗಳು ನಿಬಂಧನೆಯಲ್ಲಿ ಸೂಚಿಸಿರುವಂತೆ **ಪ್ರೊ. ಉಷಾರಾಣಿ ನಾರಾಯಣ ಸೌಮ್ಯನಾಯಕಿ** ಎಂಬ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡಲು ಮತ್ತು ದಾನಿಗಳು ದತ್ತಿಯ ನಿಬಂಧನೆಯಲ್ಲಿ ಸೂಚಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ. 20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ. 80ರಷ್ಟು ಹಣವನ್ನು ಸ್ನಾತಕ ಪದವಿಯಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಷಯದಲ್ಲಿ ಅತಿಹೆಚ್ಚು ಅಂಕ ಪಡೆದು ಪ್ರಥಮ ಬಾರಿಗೆ ತೇರ್ಗಡೆಯಾಗುವ **ವಿದ್ಯಾರ್ಥಿನಿಗೆ** ಚಿನ್ನದ ಪದಕವನ್ನು ನೀಡಲು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| ವಿಶೇಷ ಸಭೆ 2019/3.4 | Visit of Prof. G. Hemantha Kumar, Vice Chancellor, University of Mysore, Mysuru to University of Barcelona, Berlin and Huanghuai University, China. |
| DECISION | The Syndicate has approved the visit of Prof. G. Hemantha Kumar, Vice Chancellor, University of Mysore, Mysuru to University of Barcelona, Berlin from 14-04-2019 to 19-04-2019(including journey days) to attend the meeting of the MIELES Project and to visit Huanghuai University, China from 14-05-2019 0to 18-05-2019(including journey days) to participate in the sixth International Forum on Industry and Education (IFIE) without any financial commitment on the part of the University. |
| ವಿಶೇಷ ಸಭೆ 2019/3.5 | ಉನ್ನತ ಶಿಕ್ಷಣದಲ್ಲಿ ಶೈಕ್ಷಣಿಕ ದಾಖಲಾತಿ ಅನುಪಾತ (Gross Enrollment Ratio) ಹೆಚ್ಚಿಸುವ ಬಗ್ಗೆ. |
| | ಮೂಲಭೂತ ಸೌಕರ್ಯಗಳ ಕೊರತೆಯನ್ನು ಪರಿಗಣಿಸಿ ಒಂದೊಂದು ವಿಭಾಗಕ್ಕೆ ಎಷ್ಟೆಷ್ಟು ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡಬಹುದು ಎಂಬುದನ್ನು ಅರಿತು ಪ್ರವೇಶಾತಿಗೆ ಅನುಮೋದನೆಯನ್ನು ನೀಡಬೇಕಾಗುತ್ತದೆ ಎಂಬ ಅಂಶವನ್ನು ಪ್ರೊ. ಬಾಲಸುಬ್ರಮಣ್ಯ ಅವರು ಸಭೆಯ ಗಮನಕ್ಕೆ ತಂದರು. |
| ತೀರ್ಮಾನ | ಸುದೀರ್ಘ ಚರ್ಚೆಯ ನಂತರ ಉನ್ನತ ಶಿಕ್ಷಣದಲ್ಲಿ ಶೈಕ್ಷಣಿಕ ದಾಖಲಾತಿ ಅನುಪಾತವು ನೆರೆ ರಾಜ್ಯಗಳಿಗಿಂತ ಕರ್ನಾಟಕದಲ್ಲಿ ಕಡಿಮೆ ಇರುವುದರಿಂದ ಕರ್ನಾಟಕದಲ್ಲಿ ದಾಖಲಾತಿ ಪ್ರಮಾಣವನ್ನು ಹೆಚ್ಚಿಸುವ ದೃಷ್ಟಿಯಿಂದ ಸರ್ಕಾರದ ಆದೇಶದನ್ವಯ ಶೇ.20ರಷ್ಟು ಹೆಚ್ಚುವರಿ ಪ್ರವೇಶಾತಿಯನ್ನು ಎಲ್ಲಾ ಕಾಲೇಜುಗಳಿಗೆ ನೀಡಲು ಸಿಂಡಿಕೇಟ್ ಅನುಮೋದಿಸಿತು ಹಾಗೂ ವಿಶ್ವವಿದ್ಯಾನಿಲಯದಲ್ಲಿ ಶೇ.20ರಷ್ಟು ಹೆಚ್ಚುವರಿ ಪ್ರವೇಶಾತಿಯನ್ನು ಹೆಚ್ಚಿಸುವ ಬಗೆಗೆ ಒಂದು ಸಮಿತಿಯನ್ನು ರಚಿಸಲು ಸಿಂಡಿಕೇಟ್ ತೀರ್ಮಾನಿಸಿತು. |

**ಇತರೆ ವಿಷಯಗಳು:**

- ಮಾನವಿಕ ವಿಷಯಗಳಲ್ಲಿ Lecture & Tutorial ಗಳನ್ನು ತೆಗೆದುಕೊಳ್ಳಬೇಕೆಂದು ಸಿಬಿಸಿಎಸ್ ನಿಯಮವಿದೆ. Lecture ತರಗತಿಗಳು ಸರಿಯಾಗಿ ನಡೆಯುತ್ತಿವೆ. ಆದರೆ ಟ್ಯೂಟರಿಯಲ್ಸ್ ತೆಗೆದುಕೊಳ್ಳದಿರುವ ಬಗ್ಗೆ ಆರೋಪಗಳಿವೆ. ಆದ್ದರಿಂದ ಸಿಬಿಸಿಎಸ್ ನಿಯಮಗಳನುಸಾರ L.T.P. ಮಾದರಿಯಲ್ಲಿ ತೆಗೆದುಕೊಳ್ಳಲು ತಿಳಿಸಿರುವ ವಿಷಯಗಳಲ್ಲಿ ತರಗತಿಗಳು ಸಮರ್ಪಕವಾಗಿ ನಡೆಯುವಂತೆ ಕ್ರಮ ತೆಗೆದುಕೊಳ್ಳಬೇಕೆಂದೂ; ಮತ್ತು
- ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಸಂಯೋಜಿತ ಕಾಲೇಜುಗಳಿಗೆ ಸ್ಥಳೀಯ ತನಿಖಾ ಸಮಿತಿಯು ಭೇಟಿ ನೀಡಿದ ಸಂದರ್ಭದಲ್ಲಿ ಕೆಲವು ಕಾಲೇಜುಗಳಲ್ಲಿ ಮೀಸಲಾತಿಯನ್ನು ಅನುಸರಿಸದೆ ಇರುವುದು ಕಂಡುಬಂದಿದೆ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೂ ಅವರಿಗೆ ಸಂಬಂಧಿಸಿದಂತೆ ಮೀಸಲಾತಿಗಳು ಇರುವುದರಿಂದ ಈ ಪದ್ಧತಿಯನ್ನು ಅನುಸರಿಸಬೇಕೆಂದು ಪ್ರೊ. ಮಹದೇವರವರು ಸಭೆಯನ್ನು ಕೋರಿದರು.

ಮೇಲಿನ ಮೊದಲ ವಿಷಯಕ್ಕೆ ಸಂಬಂಧಪಟ್ಟಂತೆ ಸೂಕ್ತ ಕ್ರಮವಹಿಸಲಾಗುವುದು ಮತ್ತು ಎರಡನೆಯ ವಿಷಯದ ಬಗ್ಗೆ ಎಲ್ಲಾ ಕಾಲೇಜುಗಳಿಗೆ ಒಂದು ಅಧಿಸೂಚನೆಯನ್ನು ಹೊರಡಿಸಲು ಹಾಗೂ ಈ ಬಗ್ಗೆ ಒಂದು ಉಪಸಮಿತಿಯನ್ನು ರಚಿಸಿ ಎಲ್ಲಾ ಕಾಲೇಜುಗಳಿಗೂ ಭೇಟಿ ನೀಡಿ ಸಂಯೋಜನಾ ಷರತ್ತುಗಳು ಅನುಪಾಲನೆಯಾಗಿರುವ ಬಗ್ಗೆ ವರದಿ ಪಡೆಯಲು ಕ್ರಮಕೈಗೊಳ್ಳಲಾಗುವುದೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

ಯುವರಾಜ/ಮಹಾರಾಜ ಕಾಲೇಜುಗಳಲ್ಲಿಯೂ ಸ್ನಾತಕೋತ್ತರ ಪದವಿ ಕೋರ್ಸುಗಳಿದ್ದು ಸದರಿ ವಿ.ವಿ.ದ ಘಟಕ ಕಾಲೇಜುಗಳಿಗೂ ಪ್ರಾಧ್ಯಾಪಕರು ಹಾಗೂ ಅಧ್ಯಾಪಕರುಗಳನ್ನು ಯು.ಜಿ.ಸಿ ಮಾರ್ಗಸೂಚಿಯಲ್ಲಿ ಉಲ್ಲೇಖಿಸಿರುವನ್ವಯ ನೇಮಿಸಬೇಕಿದೆ. ಈ ವಿಷಯವನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಚರ್ಚೆಗೆ ಮಂಡಿಸಲಾಗುವುದೆಂದು ಎಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

ಕೊನೆಯಲ್ಲಿ, ಅಧ್ಯಕ್ಷರು ಹಾಗೂ ಮಾನ್ಯ ಕುಲಪತಿಗಳು ಸಭೆಯಲ್ಲಿ ಭಾಗವಹಿಸಿದಂತಹ ಸದಸ್ಯರುಗಳಿಗೆ ವಂದನೆಗಳನ್ನು ತಿಳಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

**ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ** | **ಕುಲಪತಿ ಮತ್ತು ಅಧ್ಯಕ್ಷರು**